


### ತಿಳಿವಳಿಕೆ ನೀಡುವ ಲೇಖನ

‘ಮದುವೆ ಭರವಸೆ ಮುರಿದರೆ ಅತ್ಯಾಚಾರವೇ?’ (ಏ. 16, ಮಂಜುಳಾ ಮುನವಳ್ಳಿ) ಮುಖಪುಟ ಲೇಖನ ಬಹಳ ಉಪಯುಕ್ತವಾಗಿದೆ. ವಿಫಲವಾಗುವ ಪ್ರೇಮದ ಮದುವೆಗಳನ್ನು ದ್ವೇಷ ಸೇಡಿನಿಂದಲೇ ನೋಡಿ ತೊಡಕು ಉಂಟುಮಾಡುತ್ತಿರುವ ಪ್ರಸಂಗಗಳಿಗೆ ತಿಳಿವಳಿಕೆ ನೀಡುವಂತಿದೆ.

—ಶಾಂತ ಗಿರೀಶ್, ಬೆಂಗಳೂರು

### ಪೋಷಕರು ಓದಿ ತಿಳಿಯಬೇಕು

ಲೇಖನ ಸಮಯೋಚಿತವಾಗಿದೆ. ಲೇಖಕರು ನೀಡಿರುವ ಪ್ರತಿ ವಿಷಯವೂ ಸತ್ಯ. ತಾಂತ್ರಿಕ ತಲೆಮಾರಿನ ಯುವಜನತೆ ಯೌವನದ ಬಿಸಿ ರಕ್ತದ ಒತ್ತಡದಲ್ಲಿ ವಿವೇಚನೆ ಇಲ್ಲದೆ ನಿರ್ಧಾರ ತೆಗೆದುಕೊಳ್ಳುವ ಮೂಲಕ ತಮ್ಮ ಜೀವನವನ್ನು ಸರಿದೂಗಿಸಲು ಕಷ್ಟಪಡುತ್ತಿದ್ದಾರೆ. ಈಗಿನ ಪೋಷಕರು ತಿಳಿವಳಿಕೆ ನೀಡುವಲ್ಲಿ ವಿಫಲರಾಗುತ್ತಿದ್ದಾರೆ. ಎಲ್ಲ ಪೋಷಕರು ಈ ಲೇಖನ ಓದಿದರೆ ಒಳ್ಳೆಯದು.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

### ಅಚ್ಚರಿಯ ‘ಸಂಗೀತ’ ಖಾದ್ಯ

‘ಕಿತ್ತೂರಿನ ವಿಶೇಷ ಖಾದ್ಯ ಸಂಗೀತ’ (ಏ. 16, ಚಂದ್ರಶೇಖರ ಎಸ್. ಚಿನಕೇಕರ) ‘ಸವಿಕರ್ನಾಟಕ’ ಅಂಕಣದಲ್ಲಿ ‘ಸಂಗೀತ’ದ ರುಚಿ ಸವಿದೆ. ಸಂಗೀತ ಸುಧೆ ಆಲಿಸಿ ಸವಿದಿದ್ದ ಕಿವಿ, ಕಣ್ಣುಗಳಿಗೆ, ಬಾಯಿ ಚಪ್ಪರಿಸಿ ತಿನ್ನುವ ‘ಸಂಗೀತ’ವೂ ಇದೆ ಎಂದು ತಿಳಿದು ಅಚ್ಚರಿಯಾಯಿತು. ‘ಕಿತ್ತೂರ ಕಿರೀಟ’ವಾಗಿ ಮೆರೆವ ‘ಸಂಗೀತ’ ನಮ್ಮ ಹೆಮ್ಮೆ.



—ಸುಮನಾ

### ಸಂಗ್ರಹಯೋಗ್ಯ ಕೈಪಿಡಿ

‘ಜೇನುಕೃಷಿ; ನಮ್ಮ ಉಳಿವು ಅಳಿವು!’ (ಏ. 16, ಹರ್ಷವರ್ಧನ ವಿ. ಶೀಲವಂತ) ಮುಖಪುಟ ಲೇಖನ ಮಾಹಿತಿಪೂರ್ಣ, ಸಮಗ್ರ ಹಾಗೂ ಸಂಗ್ರಹಯೋಗ್ಯ ಕೈಪಿಡಿಯಂತಿದೆ. ಜೇನುಕೃಷಿಯ ಎಲ್ಲ ಆಯಾಮಗಳನ್ನು, ಪ್ರಸ್ತುತ ಸ್ಥಿತಿಗತಿಯನ್ನು ವಿಶ್ಲೇಷಿಸಿದ್ದು, ನಮ್ಮ ಕಣ್ಣು ತೆರೆಸುವಂತಿದೆ. ಲೇಖನ ಓದಿದ ಬಳಿಕ, ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ, ಕಪೋತಗಿರಿಯ ಶ್ರೀ ಮಠದಲ್ಲಿ, ಎಪಿಸ್ ಸೆರೆನಾ ಇಂಡಿಕಾ ಜೇನು ಕೃಷಿ ಆರಂಭಿಸಲು ಸಿದ್ಧತೆ ನಡೆಸಿದ್ದೇವೆ. ಈ ಲೇಖನ ನಮಗೆ ಪ್ರೇರಣೆ ನೀಡಿದೆ. ನಮ್ಮ ಭಾಗದ ರೈತರಿಗೂ ಜೇನುಕೃಷಿಗೆ ಪ್ರೇರೇಪಿಸಿದ್ದೇವೆ.



—ಶಿವಕುಮಾರ ಸ್ವಾಮೀಜಿ, ಗದಗ

### ಮೆಚ್ಚುಗೆಯಾದ ಪರಿಸರಸ್ನೇಹಿ ಕ್ರಮ

ಪರಿಸರಸ್ನೇಹಿ, ನಿರ್ವಹಣೆ ಕಮ್ಮಿ, ಕೈಗೆಟಕುವ ದರದ, ಟೆರ್ರಾಕೋಟದ ಜೇನುಪೆಟ್ಟಿಗೆ (ಕಟ್ಟಿಗೆ ಫ್ರೇಮ್) ನಾವೂ ಮಾಡಬಹುದು. ಹಾಗೆಯೇ ಬೊಂಬು ಬಳಸಿ ಪೆಟ್ಟಿಗೆ ಮಾಡಬಹುದು. ಎಪಿಸ್ ಸೆರೆನಾ ಇಂಡಿಕಾ ಕುಟುಂಬ ಸೆರೆಹಿಡಿಯಲು ಒಂದು ಪುಟ್ಟ ಯಂತ್ರ ಬಂದಿದೆ, ಚುಚ್ಚಿಸಿಕೊಳ್ಳದೆ ಹಿಡಿಯಲು. ಇವೆರಡು ಮಾಹಿತಿ ಸೇರಿಸಬೇಕಿತ್ತು.

—ಶ್ರೀಕಾಂತ ಭಟ್ ಕಾರ್ಕಳ

### ಸವಿವರ ಬರಹ

ಸವಿವರವಾದ ಲೇಖನ. ವಿವಿಧ ಬಗೆಯ ಜೇನುನೊಣಗಳು ಮತ್ತು ಅವುಗಳು ಬದುಕುವ ರೀತಿ –ನೀತಿ ಅಮೋಘವಾಗಿದೆ. ‘ಜೇನು ಸಂಕುಲದ ಕೊನೆ ದುಂಬಿಯೊಂದು ನಶಿಸಿದ ಒಂದು ಗಂಟೆಯಲ್ಲಿ ಮನುಷ್ಯ ಕುಲನಾಶ’ ಎಂಬ ಕೀಟತಜ್ಞರ ನುಡಿ ಮಾರ್ಮಿಕವಾಗಿದೆ. ಇದನ್ನು ಮನುಷ್ಯ ಕುಲ ಅರಿತುಕೊಂಡರೆ ಒಳ್ಳೆಯದು.

—ವಿಜಯಕುಮಾರಿ, ಬೆಂಗಳೂರು



### ಆಸಕ್ತಿಕರ ಸಂಗತಿಗಳ ಕಥನ

‘ಕಾಲದ ಪ್ರಹಾರಗಳ ಮೌನಸಾಕ್ಷಿ ಕಾಂಗ್ರಾ ಕೋಟೆ’ (ಏ. 16, ಜಿ. ನಾಗೇಂದ್ರ ಕಾವೂರು) ಪ್ರವಾಸ ಕಥನ ಚೆನ್ನಾಗಿದೆ. ಅಂಕಿ ಅಂಶಗಳ ಸಹಿತ, ಮನಮೋಹಕ ಚಿತ್ರಗಳೊಂದಿಗೆ ಹಿಮಾಚಲ ಪ್ರದೇಶದಲ್ಲಿರುವ ಐತಿಹಾಸಿಕ ಕಾಂಗ್ರಾ ಕೋಟೆಯ ಇತಿಹಾಸ, ಭೂಕಂಪ ನಂತರದ ಸ್ಥಿತಿಯ ವಿವರಣೆಯ ಲೇಖನವು, ಇತಿಹಾಸದಲ್ಲಿ ಆಸಕ್ತಿ ಹೊಂದಿರುವವರಿಗೆ, ಸಂಗ್ರಹಯೋಗ್ಯ ಬರಹ.

—ಪರಮೇಶ್ವರ ಜೆ.ಎಂ., ಸಂಡೂರು

### ಮನಸೆಳೆದ ವರ್ಣನೆ

ಇಳಿ ವಯಸ್ಸಿನಲ್ಲಿ ನನ್ನಂತಹ ಮಹಿಳೆಯರಿಗೆ, ಹಿಮಾಲಯದ ಪ್ರವಾಸ ಹೋಗಲು ಆಗದವರಿಗೆ ಈ ಲೇಖನ ಓದುವ ಮೂಲಕ ಇತಿಹಾಸದ ಹಳೆಯ ಕೋಟೆಯನ್ನು ಸ್ವಾದಿಸುವಂತಾಯಿತು. ಕಾಂಗ್ರಾ ಕೋಟೆಯ ಶಿಲ್ಪಕಲೆ, ಅಲ್ಲಿಂದ ಹರಿಯುವ ಗಂಗಾ ಮತ್ತು ಮಾಂಜಿ ನದಿಗಳ ಸೌಂದರ್ಯದ ವರ್ಣನೆ ಮನಸೆಳೆಯಿತು.

—ಅನುರಾಧ ಟಿ., ಹೊಸಪೇಟೆ

### ಅದ್ಭುತ ಆವಿಷ್ಕಾರ

‘ಸ್ಮಾರ್ಟ್ ಪಿಲ್; ಖಾದ್ಯ ವಸ್ತುಗಳಾಗಿ ಎಲೆಕ್ಟ್ರಾನಿಕ್ ಉಪಕರಣಗಳು’ (ಏ. 16, ಎಸ್. ನಟರಾಜ್) ಅದ್ಭುತ ಆವಿಷ್ಕಾರ. ಶಸ್ತ್ರಚಿಕಿತ್ಸೆ, ಸ್ಕ್ಯಾನಿಂಗ್ ಹಲವು ವಿಷಯಗಳಲ್ಲಿ ಎಲೆಕ್ಟ್ರಾನಿಕ್ ಬಳಕೆ ಹಾಸುಹೊಕ್ಕಾಗಿದೆ. ಇಂಥ ಸಮಯದಲ್ಲಿ ಸ್ಮಾರ್ಟ್ ಕ್ಯಾಪ್ಸೂಲ್ ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಸಂಚಲನವೆನಿಸಿದೆ. ದೇಹಕ್ಕೆ ನಿರಪಾಯಕಾರಿಯಾಗಿರುವುದು ಸಂತಸ.

—ಕೆ. ನಿರ್ಮಲಮರಡಿಹಳ್ಳಿ, ಚಿತ್ರದುರ್ಗ

### ಮೈಸೂರಿನ ಗರಿಮೆ!

‘ವಿದೇಶದಲ್ಲೂ ಮೈಸೂರು ವೀಳ್ಯದೆಲೆ ಘಮಲು’ (ಏ. 16, ಶಿವಪ್ರಸಾದ್ ರೈ) ‘ಹೆಗ್ಗುರುತು’ ಅಂಕಣದಲ್ಲಿ ಮೈಸೂರಿನ ವೀಳ್ಯದೆಲೆ ಬಗ್ಗೆ ಸಚಿತ್ರ ಲೇಖನ ಉತ್ತಮ ಮಾಹಿತಿ ಒದಗಿಸಿದೆ. ಮೈಸೂರು ವೀಳ್ಯದೆಲೆ, ಮೈಸೂರು ಮಲ್ಲಿಗೆ, ಮೈಸೂರು ಪಾಕು ಹಾಗೂ ಮೈಸೂರು ರೇಷ್ಮೆ ಸೀರೆಗಳಿಗೆ ಕನ್ನಡಿಗರು ಮಾರುಹೋದಂತೆ ವಿದೇಶಗಳಲ್ಲಿಯೂ ಪ್ರಸಿದ್ಧಿ ಹೊಂದಿರುವುದು ಹೆಮ್ಮೆಯ ಸಂಗತಿ.

—ವಸುಧಾ ಜೈಶಂಕರ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in